ಉದ್ದೇಶಕ್ಕೆ ಧಕ್ಕೆ ಆಗದಂತೆ ನ್ಯಾಯಾಧೀಕರಣವು ನೀಡಿದ ನಿರ್ದೇಶನದಂತೆ ಮುಂದೆ ಯಾವುದೇ ನಿರ್ಧಾರಗಳನ್ನು ಕೈಗೊಳ್ಳಲಾಗಿಲ್ಲ.

ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನಲ್ಲಿ ಹೇಮಾವತಿ ಯೋಜನೆಗೆ ಒಟ್ಟಾರೆ ಬೇಡಿಕೆಯಾದ 54.36 ಟಿ.ಎಂ.ಸಿ.ಗೆ ಎದುರಾಗಿ 43.67 ಟಿ.ಎಂ.ಸಿ. ಮಾತ್ರ ನೀರಿನ ಹಂಚಿಕೆಯಾಗಿದ್ದು ಅದರಲ್ಲಿ ಬರುವ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶವನ್ನು ನೀರಿನ ಲೆಕ್ಕಾಚಾರ ಮಾಡುವಾಗ ಪರಿಗಣಿಸಿರುವುದಿಲ್ಲ ಹಾಗೂ ಈ ಯೋಜನೆಗೆ ನೀರಿನ ಹಂಚಿಕೆ ಇರುವುದಿಲ್ಲ. ನ್ಯಾಯಾಧೀಕರಣದ ಅಂತಿಮ ತೀರ್ಪಿನ ವಿರುದ್ದವಾಗಿ ಕರ್ನಾಟಕ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಅನುಮತಿ ಅರ್ಜಿ ಸಲ್ಲಿಸಿದೆ. ತಮಿಳುನಾಡು ಸರ್ಕಾರವು ಸಹಾ ಸರ್ವೋಚ್ಚ ನ್ಯಾಯಾಲಯದಲ್ಲಿ ವಾದಕಾಲೀನ ಅರ್ಜಿಯನ್ನು ಸಲ್ಲಿಸಿರುತ್ತದೆ.

ಮೇಲಿನ ಕಾರಣಗಳಿಂದಾಗಿ ಈವರೆಗೆ ಈ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಾಗಿರುವುದಿಲ್ಲ.

ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಹೋಬಳಿಯ ಗ್ರಾಮಗಳು ಹೇಮಾವತಿ ಯೋಜನೆಯ ಅಚ್ಚುಕಟ್ಟಿನ ವ್ಯಾಪ್ತಿಯಲ್ಲಾಗಲಿ ಅಥವಾ ಶ್ರೀರಂಗ ಏತ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಾಗಲೀ ಬರುವುದಿಲ್ಲ.

ಸ್ಥಳೀಯ ನಾಗರೀಕರಿಗೆ ಕುಡಿಯುವ ನೀರು ವ್ಯವಸ್ಥೆ ಮತ್ತು ಕೃಷಿಗೆ ಸಹಾಯ ಕಲ್ಪಿಸುವುದಕ್ಕೆ ಈ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ನ್ಯಾಯಾಧೀಕರಣದ ಅಂತಿಮ ತೀರ್ಪಿನ ವಿರುದ್ದವಾಗಿ ಕರ್ನಾಟಕ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿ ಬಗ್ಗೆ ಹಾಗೂ ತಮಿಳುನಾಡು ಸರ್ಕಾರವು ಸಹಾ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯ ಬಗ್ಗೆ ತೀರ್ಮಾನವಾದ ನಂತರ ನೀರಿನ ಲಭ್ಯತೆಯನ್ನು ಅನುಸರಿಸಿ ಸದರಿ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಸ್ಮಾರ್ಟ್ ಕಾರ್ಡ್ ಯೋಜನೆ ಮತ್ತು ಉದ್ಯೋಗ ಮೇಳ

51 (475)

ಶ್ರೀ ರಾಜಶೇಖರ ಬಸವರಾಜ್ ಪಾಟೀಲ್ (ಹುಮ್ನಾಬಾದ್)

ಪ್ರಶ್ನೆ

ಅ) ಐದು ಜನರ ಒಂದು ಕುಟುಂಬಕ್ಕೆ 30 ಸಾವಿರ ರೂ.ಗಳ ವೈದ್ಯಕೀಯ ಸಹಾಯ ಒದಗಿಸುವ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿಯಲ್ಲಿ ಹುಮ್ನಾಬಾದ್ ತಾಲ್ಲೂಕಿನಲ್ಲಿ ಎಷ್ಟು ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಣೆ ಮಾಡಲಾಗಿದೆ?

In Humnabad Taluk how many smart Cards have been distributed under RSBY scheme where Rs. 30,000 is being given as medical allowance to a family of five members?

ಆ) ಹುಮ್ನಾಬಾದ್ ತಾಲ್ಲೂಕಿನಲ್ಲಿ ಬಾಲ ಕಾರ್ಮಿಕ ಸಮೀಕ್ಷೆ ನಡೆಸಲಾಗಿದೆಯೇ?

Whether Child Labour Survey has been conducted in Humnabad Taluk?

ಇ) ಹಾಗಿದ್ದಲ್ಲಿ, ಬಾಲ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಲಾಗಿದೆಯೇ?

If so, whether Child Labour rehabilitation has been provided?

ಶ್ರೀ ಬಿ.ಎನ್.ಬಚ್ಚೇಗೌಡ (ಕಾರ್ಮಿಕ ಸಚಿವರು)

ಉತ್ತರ

ಅ) ಹುಮ್ನಾಬಾದ್ ತಾಲ್ಲೂಕಿನಲ್ಲಿ 10,707 ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಣೆ ಮಾಡಲಾಗಿದೆ.

ಆ) ನಡೆಸಲಾಗಿದೆ. ಒಟ್ಟು 308 ಬಾಲ ಕಾರ್ಮಿಕರನ್ನು ಗುರುತಿಸಲಾಗಿದೆ.

ಇ) ಸಮೀಕ್ಷೆಯಿಂದ ಗುರುತಿಸಿದ ಬಾಲ ಕಾರ್ಮಿಕರ ಪುನರ್ವಸತಿಗಾಗಿ ಸೂಕ್ತ ಸರ್ಕಾರೇತರ ಸಂಸ್ಥೆಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.